ಭಾನುವಾರ ಚಿನ್ನವ್ವ ತನ್ನ ಮನೆಯ ಮೊಟ್ಟೆಕೋಳಿ ಕುಯ್ದು ಬಾಡ್ನೆಸ್ರು ಮಾಡಿದ್ದಳು. ತನ್ನ ಮೂವರು ಮಕ್ಕಳ ಆಸ್ತಿ ಹಂಚಿಕೆಯ ವಿಷಯದಲ್ಲಿ ಮಾತುಕತೆಗೆ ಮೈದುನರ ಕರೆದಿದ್ದರಿಂದ ಅವರು ಬರುತ್ತಾರೆ ಎಂದು. ಮೊಮ್ಮಗ ಮುಕುಂದ ಅಜ್ಜಿ ಹೇಳಿದಂತೆ ಅವತ್ತೂ ಬೆಳಿಗ್ಗೆಯೇ ತನ್ನ ತಾತಂದಿರ ಮನೆಗಳ ಹತ್ತಿರ ಹೋಗಿ ವಿಷಯವನ್ನು ಅವರಿಗೆ ನೆನಪಿಸಿ, 'ಮಧ್ಯಾಹ್ನದ ಊಟಕ್ಕೂ ಅಲ್ಲೇ ಇರಬೇಕಂತೆ ನೀವು' ಅಂತ ಹೇಳಿ ಬಂದಿದ್ದ. ಚಿನ್ನವ್ವನ ಮನೆಯಲ್ಲಿ ಅವಳ ಇಬ್ಬರು ಮೈದುನರು ಹಾಗೂ ಮೂವರು ಮಕ್ಕಳು ಸೇರಿಕೊಂಡರು.

ಮಾತುಕತೆ ಶುರುವಾಗುವ ಹೊತ್ತಿಗೆ ನಿಂತ ಮಧ್ಯಾಹ್ನದ ಹೊತ್ತಾಗಿತ್ತು. ಇನ್ನೇನು ಎಮ್ಮೆಕಾಳಯ್ಯ ರಾಜಣ್ಣನಿಂದ ಅವರಪ್ಪನ ಆಸ್ತಿಯ ವಿವರಗಳನ್ನೆಲ್ಲಾ ಪಡೆಯಲು ಶುರುಮಾಡಬೇಕಾಗಿತ್ತು. ನಡುವೆ ಕಜ್ಜಿನಿಂಗಣ್ಣ 'ಹೋದಸಾರಿ ನಾವು ಸೇರಿದ್ದಾಗ ಹೇಳಿದಂತೆ, ಅದೇನ್ ಎಲ್ಲಾ ವಿವರಗಳನ್ನು ಈಗ ಹೇಳ್ರಪ್ಪ' ಎಂದು ಮೂವರನ್ನೂ ಕೇಳಿದ. ಆಗ ರಾಜ ತನಗೆ ಗೊತ್ತಿದ್ದ ತಮ್ಮಪ್ಪನ ಆಸ್ತಿಯ ವಿವರಗಳನ್ನು ಅವರಿಗೆ ಒಪ್ಪಿಸತೊಡಗಿದ. ಅವನು ಮರೆತದ್ದನ್ನು ಸಿದ್ದಯ್ಯ ನೆನಪಿಸಿಕೊಂಡು ವಿವರಿಸಿದ. ಆದರೆ ಅದೇ ಸಮಯಕ್ಕೆ ಸರಿಯಾಗಿ ಇದ್ದಕ್ಕಿದ್ದಂತೆ ಚಂದ್ರಪ್ಪನ ಹೆಂಡತಿ ಗೌರಿ ಮತ್ತು ಅವಳ ಮಗಳು ಭಾಗ್ಯ ಮನೆಗೆ ಬಂದುದು ನೋಡಿ ಎಲ್ಲರಿಗೂ ಆಶ್ಚರ್ಯವಾಯ್ತು.

ಗೌರಿಯ ಮಗಳು ಭಾಗ್ಯ ಮನೆಯೊಳಗೆ ಬರುತ್ತಿದ್ದಂತೆಯೇ ನಡುಮನೆಯ ಕಂಬ ಒರಗಿ ನಿಂತಿದ್ದ ಚಿನ್ನವ್ವನನ್ನು ನೋಡುತ್ತಲೇ 'ಅಜ್ಜಿ...' ಎಂದು ಹೋಗಿ ತಬ್ಬಿಕೊಂಡು ಅಳತೊಡಗಿದಳು. 'ಅಳಬೇಡ ನನ ಕಂದ! ಇಲ್ಲಿ ಯಾರಿಗೂ ಏನೂ ಆಗಿಲ್ಲ. ನಿಮ್ಮಪ್ಪನೂ ಚೆನ್ನಾಗೆ ಅವ್ನೆ' ಎಂದು ಮೊಮ್ಮಗಳಿಗೆ ಅಜ್ಜಿ ಸಮಾಧಾನ ಮಾಡಿದಳು. ಗೌರಿ ಈಗ ಮಿಡ್ಲ್ ಸ್ಕೂಲಿನಲ್ಲಿ ಕೊನೆಯ ವರ್ಷದಲ್ಲಿ ಓದುತ್ತಿದ್ದಳು. ಹಿಂದೆ ಗೌರಿ ಅವಳನ್ನು ಮನೆಯಿಂದ ತನ್ನ ಗಂಡನ ಮೇಲೆ ಮುನಿಸಿಕೊಂಡು ಕರೆದುಕೊಂಡು ಹೋದಾಗ, 'ಅಜ್ಜಿ ಬಿಟ್ಟು ಬರಲ್ಲ' ಅಂತ ರಚ್ಚೆ ಹಿಡಿದಿದ್ದಳು. ಚಿನ್ನವ್ವ ತನ್ನ ಸೊಸೆಗೆ ಆಗ, 'ನಿನ್ನ ಗಂಡನ ಮೇಲಿನ ಮುನಿಸಿಗೆ ನೀನು ಆ ಮಕ್ಕಳಿಗ್ಯಾಕೆ ಹಿಂಸೆ ಕೊಡ್ತಿಯಾ' ಎಂದು ರೇಗಿದ್ದಳು. ಆದರೆ ಗೌರಿ ಈಗ ತುಂಬಾ ಸೊರಗಿದ್ದಳು. ಆಕೆಯ ಯೌವನ ಇಳಿದಂತಿತ್ತು. ಆಕೆಗೆ ತನ್ನ ಗಂಡ ಚಂದ್ರಪ್ಪನಿಗೆ ಇವತ್ತು ಪಾಲುಕೊಟ್ಟು ಅವನನ್ನು ಒಂಟಿ ಮಾಡುತ್ತಿದ್ದಾರೆ ಎಂದು ವಿಷಯ ತಿಳಿದು ತನ್ನ ತವರಿನಿಂದ ಧಾವಿಸಿ ಬಂದಿದ್ದಳು. ಚಂದ್ರಪ್ಪನಿಗೆ ಅವರಪ್ಪ ಸಿದ್ದೇಗೌಡ ಇದ್ದಾಗಲೇ ಲಕ್ವ ಹೊಡೆದು ಅವನ ಎರಡು ಕಾಲುಗಳೂ ಹೋಗಿದ್ದವು. ಬಲಹೀನವಾದ ಅವನ ಕಾಲುಗಳಿಗೆ ಅವನ ಚಿಕ್ಕಪ್ಪ ಕಜ್ಜಿನಿಂಗಣ್ಣನ ನಾಟಿ ಔಷಧಿಯೂ ಕೆಲಸ ಮಾಡಿರಲಿಲ್ಲ. ಕಜ್ಜಿನಿಂಗಣ್ಣ ನಾಟಿ ಔಷಧಿಯಿಂದ ನಿನಗೆ ತಡವಾಗಿಯಾದರೂ ವಾಸಿಯಾಗುತ್ತದೆ ಎಂದು ಹೇಳುತ್ತಲೇ ಬಂದಿದ್ದ.

ಚಿನ್ನವ್ವ ಮನೆಗೆ ಬಂದ ಸೊಸೆಯನ್ನು ನಗುನಗುತ್ತಲೇ, 'ಯಾಕೆ ಇಷ್ಟು ಸೊರಗಿ ಹೋಗಿದ್ದಿ? ನನ್ನ ಮಗ ನಿನ್ನ ಸರಿಯಾಗಿ ಬಾಳಿಸಿದ್ರೆ ನಿನಗ್ಯಾಕೆ ಇಂತ ಕಷ್ಟ ಬರ್‍ತಿತ್ತು ಬಾ. ತನ್ನ ಕೈಯ್ಲಾಗ್ದಕ್ಕೆ ನಿನ್ನ ಮೇಲೆ ಶಂಕೆಪಟ್ಟ ಅವ್ನು! ಎಲ್ಲಾ ಇನ್ನು ಮೇಲೆ ಸರಿಯಾಗತ್ತೆ' ಎನ್ನುತ್ತಾ ಗೌರಿಯನ್ನು ಸಂತೋಷದಿಂದಲೇ ಬರಮಾಡಿಕೊಂಡಳು.

ಗೌರಿ ಮತ್ತು ಚಂದ್ರಪ್ಪ ಉರುಫ್ ಕುಂಟಪ್ಪ ಆಗಾಗ ತಂತಮ್ಮ ವಿಷಯ ವಾಸನೆ, ನಡವಳಿಕೆ, ಶೀಲದ ಬಗೆ ಪರಸ್ಪರ ಅನುಮಾನಪಡುತ್ತಾ ಜಗಳವಾಡುತ್ತಿದ್ದರು. ಆದರೆ ಗೌರಿ ಬೇರೆ ಪುರುಷರನ್ನು ಕಣ್ಣೆತ್ತಿಯೂ ನೋಡಿದವಳಲ್ಲ. ಆದರೆ ಕುಂಟಪ್ಪ ಊರಿನಲ್ಲಿ ಆಗಾಗ ಕೆಲವು ಹೆಂಗಸರ ಬಳಿ ಚೇಷ್ಟೆಗಳನ್ನು ಆಡುತ್ತಿದ್ದದ್ದು ಆಕೆಗೆ ತಿಳಿದಿತ್ತು. ಗೌರಿ ತನ್ನ ಗಂಡನ ಮೇಲೆ ಮುನಿಸಿಕೊಂಡು ಮಗಳ ಜೊತೆಗೆ ತವರು ಸೇರಿಕೊಂಡಿದ್ದಳು. ಆಕೆ ಒಮ್ಮೆ ತನ್ನ ಮಾವ ಸಿದ್ದೇಗೌಡರು ಸತ್ತದಿನ ಮಣ್ಣಿಗೆ ಅಂತ ತನ್ನ ಮಗಳು ಭಾಗ್ಯ, ತನ್ನ ಅಣ್ಣ, ಅತ್ತಿಗೆ ಜೊತೆ ಬಂದು ಹೋದವಳು. ಆಮೇಲೆ ತನ್ನ ಮಾವನ ತಿಂಗಳ ತಿಥಿಗೆ ಉಷಾರಿಲ್ಲದೆ ಬಂದಿರಲಿಲ್ಲ. ಬದಲಾಗಿ ತನ್ನ ಅಣ್ಣ, ಅತ್ತಿಗೆ ಹಾಗೂ ಅವರ ಮಗಳು ಶಾರದೆ, ತನ್ನ ಮಗಳು ಭಾಗ್ಯಳನ್ನು ಕಳಿಸಿದ್ದಳು. ಆಗ ಚಿನ್ನವ್ವ ಮೊಮ್ಮಗಳು ಭಾಗ್ಯನ, 'ಇಲ್ಲೇ ಇರು. ಇಲ್ಲಿಂದಲೇ ನಿನ್ನ ಪೇಟೆಗೆ ಶಾಲೆಗೆ ಓದಕ್ಕೆ ಕಳಿಸ್ತಿನಿ' ಅಂತ ಒತ್ತಾಯಿಸಿದ್ದಳು. ಆದರೆ ಭಾಗ್ಯಳಿಗೆ ಇದಾವುದೂ ತಿಳಿಯದೆ, ಅಜ್ಜಿಗೆ ಇರಕ್ಕಾಗಲ್ಲ ಅಂತಲೂ ಹೇಳಕಾಗದೆ, ತನ್ನ ಸೋದರ ಮಾವ, ಅತ್ತೆ, ಶಾರದೆ ಜೊತೆ ಹೊರಟು ಹೋಗಿದ್ದಳು. ಜಗುಲಿಯಲ್ಲೇ ಕೂತಿದ್ದ ಅಪ್ಪ ಚಂದ್ರಪ್ಪನೂ ಮಗಳಿಗೆ ತನ್ನ ಬಳಿಯೇ ಮುಕುಂದನ